"ವೆಸ್ಟರ್ನ್ ಕಮೋಡ್ ಈಸ್ಟರ್ನ್ ಕಮೋಡ್?"

"ಎರಡೂ ಇರ್ಲಿ."

"ಒಂದನ್ನು ಆರಿಸಬೇಕಾಗುತ್ತದೆ."

"ಈಸ್ಟ್ ಫೇಸಿಂಗ್ ವೆಸ್ಟರ್ನ್ ಕೊಡಿ!"

"ನೀವು ಕಾಪರೇಟ್ ಮಾಡ್ಬೇಕು, ಸರ್."

"ಮಾಡ್ತ ಇದ್ದೇನಲ್ಲ, ಇದಕ್ಕಿಂತ ಹೆಚ್ಚಿನ ಕಾಪರೇಟ್ ಏನು?"

"ವೆಸ್ಟರ್ನ್ ಕಮೋಡ್."

"ವೆಸ್ಟರ್ನ್ ಕಮೋಡ್, ಫೇಸಿಂಗ್ ಯಾವುದೇ ಇರ್ಲಿ."

"ಸರ್ವಿಸ್ ರೂಮ್‌ನಲ್ಲಾ ಹಾಲ್‌ನಲ್ಲಾ?"

"ಎಂದರೆ?"

"ಊಟ ತಿಂಡಿ ಎಲ್ಲಿ ಅಂತ."

"ನಾನಿನ್ನೂ ಯೋಚ್ನೆ ಮಾಡಿಲ್ಲ.."

"ಈಗ ಮಾಡಿ, ನಾನಿಲ್ಲಿ ಕಂಪ್ಯೂಟರಿಗೆ ಫೀಡ್ ಮಾಡಬೇಕಾಗುತ್ತದೆ."

"ಹಾಲ್‌ನಲ್ಲೇ ಆಗಲಿ."

"ಸರ್ವಿಸ್ ಹಾಲ್‌ನಲ್ಲಿ."

"ಆಯ್ತು?"

"ಏನಾದರೂ ಮೆಡಿಕಲ್ ಕಂಡಿಶನ್ ಇದೆಯಾ?"

"ದೇವರ ದಯದಿಂದ ಇದು ತನಕ ಇಲ್ಲ. ಇನ್ನು ಬರಬಹುದು. ಏಂಡ್ ಒನ್ ಮೋರ್ ಥಿಂಗ್, ಯಂಗ್ ಲೇಡಿ!"

"ಸರ್?"

"ಒನ್ ಮೋರ್ ಕ್ವೆಶ್ಚನ್ ಏಂಡ್ ಐ ಏಮ್ ಔಟ್!"

"ಆದರೆ ಒಂದು ಲಾಸ್ಟ್ ಕ್ವೆಶ್ಚನ್ ಸರ್. ದಿಸ್ ಈಸ್ ಮ್ಯಾಂಡೇಟರಿ. ಏನಾದರೂ ಎಮರ್ಜೆನ್ಸಿಯಲ್ಲಿ ಯಾರನ್ನು ಕಾಂಟ್ಯಾಕ್ಟ್ ಮಾಡಬೇಕು? ಹೆಸರು, ವಿಳಾಸ, ಮತ್ತು ಮೊಬೈಲ್ ನಂಬರ್."

ಆದರೆ ಅದನ್ನು ಕೇಳಿಸಿಕೊಳ್ಳುವುದಕ್ಕೆ ಸೋಮನಾಥಪುರಂ ಗಣೇಶನ್ ರಾಮನಾಥನ್ ರಂಗನಾಥನ್ ಚಿಪುಣ್ಕರ್ ಅಲ್ಲಿರಲಿಲ್ಲ. ಬೇರೆ ಹೋಟೆಲುಗಳನ್ನು ಹುಡುಕಲು ಹೊರಟಿದ್ದ.

ತಡ ರಾತ್ರಿ ಊರೆಲ್ಲ ಸುತ್ತಿ ಆತ ಮತ್ತೆ ಅದೇ ಹೋಟೆಲಿನ ರಿಸೆಪ್ಶನ್ ಕೌಂಟರಿನ ಮುಂದೆ ಹಾಜರಾದ... "ಸಾರಿ, ಇದ್ದುದರಲ್ಲಿ ನೀವೇ ಬೆಟರ್," ಎಂದ. ಆದರೆ ಕೌಂಟರಿನಲ್ಲಿ ಈಗ ಇನ್ನೊಬ್ಬ ಚೆಲುವೆ ಕುಳಿತಿದ್ದಳು.

"ವೆಲ್ಕಂ ಟು ಹೊಟೇಲ್ ಮಿತ್ಸುಬಿಶಿ, ಸರ್. ವ್ಹಾಟ್ ಕ್ಯಾನ್ ವಿ ಡೂ ಫಾರ್ ಯು?" ಎಂದಳು.

✿